ಸಾಕ್ಷಿಯನ್ನು ದಿ:23.08.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿಗಳ ಪರ ಶ್ರೀ ಬಿ ಎನ್ ಟಿ ವಕೀಲರಿಂದಃ**

ನಾನು 5 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಚಿನ್ನಸ್ವಾಮಿ 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. ನಿಪಿ-14 ಕ್ರಯದ ಕರಾರು ವಾದಿ ಸತ್ಯನಾರಾಯಣ್ ಗೆ ನಾನು ನನ್ನ ಯಜಮಾನರು ಸೇರಿ ಮಾಡಿಕೊಟ್ಟಿದ್ದೇವೆ ಎಂದರೆ ಸಾಕ್ಷಿಯು ಸಾಲದ ಭದ್ರತೆಗಾಗಿ ಮಾಡಿಕೊಟ್ಟ ದಾಖಲೆ ಎಂದು ಹೇಳುತ್ತಾರೆ. ನಿಪಿ-14 ದಾಖಲೆಯ ಎಲ್ಲಾ ಒಕ್ಕಣೆಗಳನ್ನು ನಾನು, ನನ್ನ ಗಂಡ ಸೇರಿ ಓದಿ ತಿಳಿದುಕೊಂಡು ಸಹಿ ಮಾಡಿದ್ದೇವೆ ಎಂದರೆ ಸಾಕ್ಷಿಯು ಆ ಸಮಯದಲ್ಲಿ ಓದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ನಿಪಿ-14 ರ ಮೊದಲನೆ ಪುಟದ ಹಿಂಬದಿಯಲ್ಲಿರುವ ಎರಡು ಫೋಟೋಗಳನ್ನು ತೋರಿಸಿದಾಗ ಅದನ್ನು ನೋಡಿ ತನ್ನ ಗಂಡ ಚಿನ್ನಸ್ವಾಮಿ ಮತ್ತು ತಾನು ಇರುವುದನ್ನು ನೋಡಿ ಗುರುತಿಸಿದ್ದಾರೆ. ಸದರಿ ಫೋಟೋಗಳನ್ನು ಕ್ರಮವಾಗಿ ನಿಪಿ-14(ಎ) ಮತ್ತು 14(ಬಿ) ಎಂದು ಗುರುತಿಸಲಾಯಿತು.

ನಮ್ಮ ಲಿಖಿತ ಹೇಳಿಕೆಯಲ್ಲಿ ವಾದಿಯಿಂದ ನಾವು ರೂ.5,00,000/- ನಗದು ಪಡೆದ ಬಗ್ಗೆ ಹೇಳಿದ್ದೇವೆ. ಸದರಿ ಕರಾರಿನಂತೆ ಪ್ರತಿಶತ 12 ವಾರ್ಷಿಕ ಬಡ್ಡಿಯಂತೆ ವಾದಿಗೆ ಹಣ ವಾಪಸ್ಸು ಕೊಡಲು ಒಪ್ಪಿದ್ದೇವೆ. ಸದರಿ ಬಡ್ಡಿ ಹಣವನ್ನು ವಾದಿಗೆ ಪ್ರಾರಂಭಿಕ 6 ತಿಂಗಳವರೆಗೆ ಕೊಟ್ಟಿದ್ದೇವೆ ನಂತರ ಆರ್ಥಿಕ ಕಷ್ಟವಾಗಿ ಬಡ್ಡಿ ಕೊಟ್ಟಿಲ್ಲ. ಬಡ್ಡಿ ಹಣ ವಾದಿಗೆ ಕೊಟ್ಟ ಬಗ್ಗೆ ರಸೀದಿ ಪಡೆದುಕೊಂಡಿಲ್ಲ. ನಿಪಿ-14 ರ ಕರಾರು ಪತ್ರದಲ್ಲಿ ಬರೆದ ವಿಷಯಗಳ ಬಗ್ಗೆ ನಾನು ತಿಳಿದುಕೊಂಡಿಲ್ಲ. ನನ್ನ ಗಂಡ ನಿಪಿ-14 ಕ್ಕೆ ನಾನು ಬರುವ ಹೊತ್ತಿಗೆ ಸಹಿ ಹಾಕಿದ್ದರು ಹಾಗಾಗಿ ಅದರ ಒಕ್ಕಣೆಗಳ ಬಗ್ಗೆ ತಿಳಿದುಕೊಂಡಿದ್ದಾರಾ ಅಥವಾ ಇಲ್ಲವೋ ಎಂದು ತಿಳಿದುಕೊಂಡಿಲ್ಲ. ನನ್ನ ಗಂಡನಿಗೆ ಈ ದಾವೆಯಲ್ಲಿ ಸಾಕ್ಷಿ ನುಡಿಯಲು ಆಗುವುದಿಲ್ಲ ಏಕೆಂದರೆ ಅವರಿಗೆ ಗ್ಯಾಸ್ ಬರಸ್ಟ್

ಆಗಿ ಗಾಯಗಳಾಗಿ ಹಾಸಿಗೆ ಹಿಡಿದಿದ್ದಾರೆ. ನಿಪಿ-14 ಕ್ರಯದ ಕರಾರಿನಲ್ಲಿ ಬರೆದ ಎಲ್ಲಾ ವಿಷಯಗಳು ನನಗೆ ಮತ್ತು ನನ್ನ ಯಜಮಾನರಿಗೆ ಗೊತ್ತಿದೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು)**

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.